# ಶ್ರೀ ರಘೂತ್ತಮತೀರ್ಥರು




ಭಾವಬೋಧಕೃತಂ ಸೇವೇ ರಘೂತ್ತಮಮಹಾಗುರುಮ್ ।

ಯಚ್ಛಿಷ್ಯಶಿಷ್ಯಶಿಷ್ಯಾದ್ಯಾಷ್ಟಪ್ಪಣ್ಯಾಚಾರ್ಯ ಸಂಜ್ಞಿತಾ: ॥

ರಘೋತ್ತಮಗುರುರ್ಬೂಯಾನ್ಮಮ ಜ್ಞಾನಾಯ ಸರ್ವದಾ ।

ಶ್ರೀಮಧ್ವಶಾಸ್ತ್ರಂ ಸಂಶೋಧ್ಯ ಯ: ಸಮ್ಯಜ್ಞಾನಮಾಪ್ತವಾನ್ ॥

ರಘೂತ್ತಮಮುನೀನ್ ವಿದ್ಯಾಗುರೂನ್ ಪರಗುರೂಂಸ್ತಥಾ ।

ವಂದೇ ಶ್ರೀಮಧ್ವಶಾಸ್ತ್ರೋತ್ಥವಿನಿರ್ಮಲಮತೀನಹಂ ॥

ರಘೂತ್ತಮಗುರುರ್ದದ್ಯಾತ್ ರಘೂತ್ತಮಕಥಾದರಮ್ ।

ರಘೂತ್ತಮಗ್ರಂಥಜಾತರಘೂತ್ತಮಕಥಾದೃತ:

# ಶ್ರೀರಘೋತ್ತಮತೀರ್ಥರು

ಸಂಗ್ರಹ – ನರಹರಿಸುಮಧ್ವ

ಇವರ ಕಾಲ – ೧೫೩೭–೧೫೯೬

ಗುರುಗಳು – ಶ್ರೀ ರಘುವರ್ಯತೀರ್ಥರು

ವಿದ್ಯಾಗುರುಗಳು – ಶ್ರೀವರದಾಚಾರ್ಯರು

ಶಿಷ್ಯರು – ಶ್ರೀವೇದವ್ಯಾಸತೀರ್ಥರು

- ಶ್ರೀರಘುಪತಿತೀರ್ಥರು (ಚಿಕ್ಕವಯಸ್ಸಿನಲ್ಲಿಯೇ ವೈಕುಂಠಯಾತ್ರೆಯನ್ನು ಮಾಡಿದರು)
- ಶ್ರೀವೇದೇಶತೀರ್ಥರು
- ತರಂಗಿಣೀ ರಾಮಾಚಾರ್ಯರು
- ರೊಟ್ಟಿವೇಂಕಟಾದ್ರಿಭಟ್ಟರು
- ಆನಂದ ಭಟ್ಟಾರಕರು

ವೃಂದಾವನ – ತಿರುಕೋಯಿಲೂರು (ಪಿನಾಕಿ ನದಿ ಸಮೀಪ)

ಪೂರ್ವಾಶ್ರಮ ನಾಮ – ರಾಮಾಚಾರ್ಯ

ಜನಕರು – ತಂದೆ – ಸುಬ್ಬಾಭಟ್ಟ, ತಾಯಿ – ಗಂಗಾಬಾಯಿ

ಉಪನಯನ – ಐದನೇ ವಯಸ್ಸಿನಲ್ಲಿ

ಆಶ್ರಮ ದಿನ – ಆನಂದ ಸಂವತ್ಸರದ ಚೈತ್ರಮಾಸದ ಶುಕ್ಲ ದ್ವಿತೀಯಾ (೫.೩.೧೫೫೪)

ಹೊಸವ್ಯವಸ್ಥೆಗಳು – ಈ ಮುಂಚೆ ಸನ್ಯಾಸಿಗಳು ಭೋಜನಕ್ಕೆಂದು ಭಿಕ್ಷೆಗೆ ತೆರಳಿ, ಅದರಿಂದ ಲಭಿಸುವ ಅನ್ನದಿಂದಲೇ ಜೀವನ ನಿರ್ವಹಣೆ ಸಾಗಬೇಕಿತ್ತು. ಶ್ರೀ ರಘೋತ್ತಮರು ಅದನ್ನು ಸಂಪೂರ್ಣ ಬದಲಾಯಿಸಿ, ಮಠದಲ್ಲಿ ತಮ್ಮ ಭೋಜನಕ್ಕೆಂದು ಪ್ರತ್ಯೇಕ ಅಡುಗೆಯ ವ್ಯವಸ್ಥೆಯನ್ನು ಪ್ರಾರಂಭಿಸಿದರು. ಭಿಕ್ಷೆಯ ವ್ಯವಸ್ಥೆ ಯಾರದೇ ಇದ್ದರೂ, ಪಾಕಕಾರ್ಯ ಮಠದಿಂದಲೇ ಆಗಬೇಕು, ಅದನ್ನು ಭಗವಂತನಿಗೆ ನಿವೇದಿಸಿ, ಪ್ರಸಾದವನ್ನು ಸ್ವೀಕರಿಸಬೇಕು. ಮತ್ತೊಬ್ಬರಿಂದ ಸಿದ್ದವಾದ ಆಹಾರವನ್ನು ಸರ್ವಾತ್ಮನಾ ತೊರೆಯಬೇಕು ಎಂಬ ಪದ್ದತಿಯನ್ನು ಆರಂಭಿಸಿದರು.

ಸಂಚಾರಕ್ರಮದಲ್ಲೂ ಗಮನಾರ್ಹ ಬದಲಾವಣೆಯನ್ನು ಅಳವಡಿಸಿದರು. ಅಲ್ಲಿಯವರೆಗೂ ಸ್ವತ್: ಪೀಠಾಧೀಶರೇ ದೇವರ ಪೆಟ್ಟಿಗೆಯನ್ನು ಭುಜದ ಮೇಲಿರಿಸಿಕೊಂಡು ಕೈಲಿ ದಂಡ ಹಿಡಿದು, ಕಾಲ್ನಡಿಗೆಯಲ್ಲಿ ಸಂಚರಿಸುವ ರೂಡಿಯಿತ್ತು. ರಘೂತ್ತಮರು ಸಂಚಾರಕ್ಕೆ ಆನೆ, ಕುದುರೆ, ಮೇನೆಗಳನ್ನು ಏರ್ಪಡಿಸಿದರು. ವಂದಿಮಾಗಧರು ಬಿರುದುಬಾವಲಿಗಳನ್ನು ಹಾಡುತ್ತಾ, ಮುಂದೆ ತೆರಳುವಂತೆ ಮಾಡಿದರು

## ಗ್ರಂಥರಚನೆ –

೧. **ತತ್ತ್ವಪ್ರಕಾಶಿಕಾಭಾವಬೋಧ** – ಶ್ರೀ ಜಯತೀರ್ಥರ ತತ್ತ್ವಪ್ರಾಕಾಶಿಕೆಗೆ ರಚಿತವಾಗಿರುವ ಟಿಪ್ಪಣೀಗ್ರಂಥ. ಇದರಲ್ಲಿ ಶ್ರೀರಘೋತ್ತಮರು ಸುಮಾರು ೫೦ ಅಪೂವ ಪ್ರಮಾಣ ಶ್ಲೋಕಗಳನ್ನು ಉಲ್ಲೇಖಿಸಿರುವುದು ತುಂಬಾ ಗಮನಾರ್ಹ.

ಪ್ರಣಮ್ಯ ಕಲ್ಯಾಣಗುಣಂ ರಮೇಶಮಗಾಧಬೋಧಂ ಜಯಯೋಗಿವರ್ಯಮ್ ।
ಗುರೋರ್ಗುರುಂ ಗುರುಮಾರ್ಯಂಶ್ಚ ತತ್ತ್ವಪ್ರಕಾಶಿಕಾಭಾವಮಹಂ ಪ್ರವಕ್ಷ್ಯೇ ॥ ಆದಿ

ರಘುವರ್ಯಗುರುಪ್ರೋಕ್ತೋ ಭಾವೋ ಜಯಮುನೇರ್ಮಯಾ ।
ಲಿಖಿತೋಮಂದಬೋಧಾರ್ಥಂ ಪ್ರೀಯತಾಂ ಶ್ರೀಪತಿಸ್ತತಃ ॥ ಅಂತ್ಯ

೨. **ಬೃಹದಾರಣ್ಯಕೋಪನಿಷದ್ಭಾಷ್ಯಭಾವಭೋಧ** – ಬೃಹದಾರಣ್ಯಭಾಷ್ಯಕ್ಕೆ ರಚಿಸಿರುವ ವಿಸ್ತೃತವಾದ ಟೀಕೆ

ಲಕ್ಷ್ಮೀಪತಿಂ ಸುಖಮುಖ್ಯೈರಖಿಲೈರ್ಗುಣೌಘೈಃ ಪೂರ್ಣಂ ವ್ಯಪೇತನಿಖಿಲಾಘಮಚಿಂತ್ಯಶಕ್ತಿಮ್ ।
ಪ್ರಾಣಾದಿಸರ್ವಜಗತೋ ಜನಿಪೂರ್ವಹೇತುಂ ಮೋಕ್ಷೈಕಹೇತುಮನಿಶಮ್ ಪ್ರಣಮಾಮಿ ವಿಷ್ಣುಮ್ ॥ ಆದಿ ।

ಬೃಹದಾರಣ್ಯಭಾಷ್ಯಸ್ಯ ವಿವೃತಿರ್ಯಾ ಕೃತಾ ಮಯಾ ।
ತಜ್ಜನ್ಯಪುಣ್ಯಮಖಿಲಮವಾಪ್ನೋತು ಗುರುರ್ಮಮ । ಅಂತ್ಯ ।

೩. **ವಿಷ್ಣುತತ್ತ್ವನಿರ್ಣಯ ಟೀಕಾ ಭಾವಬೋಧ** – ವಿಷ್ಣುತತ್ತ್ವನಿರ್ಣಯದ ಮೇಲೆ ರಚಿತವಾಗಿರುವ ಟಿಪ್ಪಣಿ.

ನತ್ವಾ ಲಕ್ಷ್ಮ್ಯಾಃ ಪತಿಮಾನಂದತೀರ್ಥಂ ತಥಾ ಜಯಾರ್ಯಂ ಪರಮಂ ಗುರುಂ ಚ ।

ಗುರುಂ ಚ ಮೇ ಜಯತೀರ್ಥಿಯಭಾವಂ ವಕ್ಷ್ಯೇ ವಿಷ್ಣುಪ್ರೀತಯೇ ಅಹಂ ಸ್ವಶಕ್ತ್ಯಾ ॥ ಆದಿಶ್ಲೋಕ ।

೪. **ಗೀತಾಭಾಷ್ಯಪ್ರಮೇಯದೀಪಿಕಾ ಭಾವಬೋಧ** – ಶ್ರೀಮಧ್ವಾಚಾರ್ಯರ ಗೀತಾಭಾಷ್ಯ ಕೃತಿಗೆ ರಚಿತವಾಗಿರುವ ಜಯತೀರ್ಥರ ಟೀಕೆ ಪ್ರಮೇಯದೀಪಿಕ. ಅದರ ಮೇಲೆ ಇಂದು ಉಪಲಭ್ಧವಿರುವ ಅತ್ಯಂತ ಪ್ರಾಚೀನ ಟಿಪ್ಪಣಿ ಶ್ರೀ ರಘೋತ್ತಮತೀರ್ಥರ ಈ ಭಾವಬೋಧ.

ನತ್ವಾ ಶ್ರೀಶಂ ಮಧ್ವಮುನಿಂ ಜಯಾರ್ಯಂ ಗುರೋರ್ಗುರುಂ ಗುರುಮಪ್ಯಾದರೇಣ ।
ಶ್ರೀಮದ್ಗೀತಾಭಾಷ್ಯಟೀಕಾಸುಭಾವಂ ವಕ್ಷ್ಯೇ ಶಕ್ತ್ಯಾ ಗುರುಶಿಕ್ಷಾನುಸಾರಾತ್ । ಆದಿಶ್ಲೋಕ ।

೫. **ಸನ್ನ್ಯಾಯವಿವೃತಿ ಭಾವಬೋಧ** – ಶ್ರೀಮದಾಚಾರ್ಯರ ನ್ಯಾವವಿವರಣ ಕೃತಿಯಮೇಲೆ ಶ್ರೀ ಜಯತೀರ್ಥರು ಟೀಕೆಯನ್ನು ರಚಿಸಿದ್ದರೂ, ಅದು ಸಮಗ್ರವಾಗಿಲ್ಲ. ಅದು ಉಪಲಬ್ಧವಿರುವುದು ಮೊದಲ ಅಧ್ಯಾಯದ ಮೊದಲ ಎರಡುಪಾದ ಮತ್ತು ಮೂರನೆ ಪಾದ ಆರಂಭದ ಹದಿನಾಲ್ಕು ಅಧಿಕರಣಗಳಿಗೆ ಮಾತ್ರ. ಜಯತೀರ್ಥರ ಹದಿನೆಂಟು ತೀಕಾಗ್ರಂಥಗಳಲ್ಲಿ ಅಪೂರ್ಣವಾಗಿರುವ ಕೃತಿ ಇದೊಂದೇ. ಅದರ ಉಳಿದ ಭಾಗವನ್ನು ಪೂರ್ಣಗೊಳಿಸಿದ ಶ್ರೇಯಸ್ಸು ಶ್ರೀರಘೋತ್ತಮತೀರ್ಥರದ್ದು.

ಗುಣಾದಿಸದ್ರತ್ನಯುತಂ ಕ್ಷಯಾದಿದೋಷೋಜ್ಝಿತಂ ವೇದನದೀಭಿರಾಪ್ಯಮ್ ।
ಕೃಪಾಪಯಸ್ಕಂ ಹರಿದುಗ್ಧವಾರ್ಧಿ ಶ್ರಯೇ ಸ್ವಪಾದಪ್ಲವಮುಕ್ತಗಮ್ಯಮ್ । ।ಆದಿ।

ತತ್ತ್ವಪ್ರಾಕಶಿಕಾಸಂಸ್ಥೋ ಮಯಾ ಅನ್ನುಗ್ರಹತೋ ಹರೇ ।
ಸನ್ನ್ಯಾವಿವೃತೇರ್ಭಾವೋ ಬಾಲಬೋಧಾರ್ಥಮುದ್ಧೃತ: ॥ ।ಅಂತ್ಯ।

## ೬. ಅನುವ್ಯಾಖ್ಯಾನ ನ್ಯಾಯಮಾಲ ಬ್ರಹ್ಮಸೂತ್ರ ಸಂಬಂಧಪ್ರದೀಪ

ನಮಾಮಿ ತರ್ಕಾಭಯಬಾಣಚಾಪಪಾಣೀ ಸದಾ ಮಧ್ವಕಾರಾಭಿಪೂಜ್ಯೌ ।
ಶ್ರೀವ್ಯಾಸರಾಮೌ ಜಯಸನ್ಮುನೀಂದ್ರವಂದ್ಯಾವಲಂ ಮದ್ಗುರುಮಾನಸಸ್ಥೌ ॥ ಆದಿ ।

ಸುವರ್ಣಸೂತ್ರವಿಲಸ್ನ್ಯಾಯರತ್ನಬಿಭೂಷಿತಾಮ್ ।
ತ್ರಯೀ ಹರಿಪ್ರಿಯಾಂ ದ್ರಷ್ಟುಮ್ ಪ್ರದೀಪೋ ಅಯಂ ನಿರೂಪಿತ: ॥ ಅಂತ್ಯ ।

## ೭. ವಿವರಣೋದ್ಧಾರ:

## ೮. ತಾರತಮ್ಯಸ್ತೋತ್ರಮ್

ಸರ್ವೋತ್ತಮೋ ವಿಷ್ಣುರಥ ಶ್ರೀಸ್ತತೋ ಬ್ರಹ್ಮಮಾರುತೌ ।
ಅಥ ವಾಣೀ ಭಾರತೀ ಚ ತತ: ಶೇಷವಿಪೇಸ್ವರಾ: ॥ ಆದಿಶ್ಲೋಕ \

ಇತ್ಯೇತತ್ ತಾರತಮ್ಯಂ ಯೋ ಜಾನೀಯದಥವ ಪಠೇತ್ ।
ತಸ್ಮೈಶ್ರದ್ದಧತೇ ವಿಷ್ಣು:ಪ್ರೀಯತೇ ಭಗವಾನ್ ಪರ: । ಅಂತ್ಯಶ್ಲೋಕ ।

೯. **ತಿಥಿತ್ರಯವಿನಿರ್ಣಯ** – ಏಕಾದಶಿ ವ್ರತದ ಬಗ್ಗೆ ವಿವರಗಳನ್ನು ಕೃಷ್ಣಾಮೃತಮಹಾರ್ಣವ ಮತ್ತು ಶ್ರೀಕೃಷ್ಣಜಯಂತಿಯ ಬಗ್ಗೆ ಜಯಂತೀಕಲ್ಪ ಎಂಬ ಗ್ರಂಥಗಳನ್ನು ಶ್ರೀಮದಾಚಾರ್ಯರು ನೀಡಿದರು. ಅದರಲ್ಲಿ ದಶಮೀ, ಏಕಾದಶಿ, ದ್ವಾದಶಿ ದಿನತ್ರಯಗಳ ಬಗ್ಗೈ ಅಪೂರ್ವ ಮಾಹಿತಿಯನ್ನು ನೀಡಿದ್ದಾರೆ.

ನತ್ವಾ ಶ್ರೀರಘುವರ್ಯಾಣಾಂ ಪಾದಪದ್ಮಯುಗಂ ತಥಾ ।
ಕರಿಷ್ಯೇ ಸುಖಬೋಧಾಯ ತಿಥಿತ್ರಯವಿನಿರ್ಣಯಮ್ ॥

೧೦. **ಶ್ರವಣದ್ವಾದಶೀನಿರ್ಣಯ**: – ಶ್ರವಣೋಪವವಾಸವು ಸರ್ವರಿಗೂ ಉಪೋಷ್ಯವಾದ ಶ್ರವಣದ್ವಾದಶಿ ಮತ್ತು ವಿಷ್ಣುಪಂಚಕ ಮಾಡುವವರಿಗೆ ಶ್ರವಣ ಮೊದಲಾದ ಬಗ್ಯೆ ನಿರ್ಣಯ ಗ್ರಂಥ.